International Journal of Kannada Research
www.kannadajournal.com

ISSN: 2454–5813
IJKR 2025; 11(1): 38-41
© 2025 IJKR
www.kannadajournal.com
Received: 12-11-2024
Accepted: 16-12-2024

**ಡಾ. ಮಹದೇವಪ್ಪ ಹರಿಜನ**
ಸಹಾಯಕ ಪಾಧ್ಯಾಪಕರು,
ರಾಜ್ಯಶಾಸ್ತ್ರ ವಿಭಾಗ,
ಎಸ್.ಜೆ.ಎಮ್.ವಿ.ಎಸ್, ಕಲಾ
ಹಾಗೂ ವಾಣಿಜ್ಯ ಮಹಿಳಾ
ಮಹಾವಿದ್ಯಾಲಯ, ಹುಬ್ಬಳ್ಳಿ,
ಕರ್ನಾಟಕ, ಭಾರತ

**Corresponding Author:**
**ಡಾ. ಮಹದೇವಪ್ಪ ಹರಿಜನ**
ಸಹಾಯಕ ಪಾಧ್ಯಾಪಕರು,
ರಾಜ್ಯಶಾಸ್ತ್ರ ವಿಭಾಗ,
ಎಸ್.ಜೆ.ಎಮ್.ವಿ.ಎಸ್, ಕಲಾ
ಹಾಗೂ ವಾಣಿಜ್ಯ ಮಹಿಳಾ
ಮಹಾವಿದ್ಯಾಲಯ, ಹುಬ್ಬಳ್ಳಿ,
ಕರ್ನಾಟಕ, ಭಾರತ

# ಪ್ರಜಾತಂತ್ರ ರಾಜಕೀಯ ಆಡಳಿತ ಹಾಗೂ ಮಹಿಳಾ ಪ್ರಾತಿನಿಧ್ಯತೆ

**ಮಹದೇವಪ್ಪ ಹರಿಜನ**

**ಅಮೂರ್ತ**
ಪ್ರಜಾಪ್ರಭುತ್ವವು ಅನೇಕ ಅಂಶಗಳುಳ್ಳ ವಿಶಾಲ ಧ್ಯೇಯಗಳನ್ನು ಹೊಂದಿದ್ದು ಅದು ಜನರಿಂದ, ಜನರಿಗಾಗಿ ಜನರೇ ನಡೆಸುವ ಸರ್ಕಾರವಾಗಿದೆ. ಜನರ ಅಭಿವ್ಯಕ್ತಿ ಸ್ವಾತಂತ್ರ್ಯ ಸಾಮಾಜಿಕ ಜೀವನ, ಆಡಳಿತದಲ್ಲಿ ಜನರ ಪ್ರಾತಿನಿಧ್ಯ, ಜನನಾಯಕರ ಸಾರ್ವಜನಿಕ ಲೆಕ್ಕಾಚಾರ, ಅಧಿಕಾರದ ಸಮಾನ ಹಂಚಿಕೆ ಇತ್ಯಾದಿ ಪ್ರಬುದ್ಧ ಅಂಶಗಳನ್ನು ಪ್ರಜಾಪ್ರಭುತ್ವವು ಒಳಗೊಂಡಿದೆ. ಸಾಮಾಜಿಕ ವೈವಿಧ್ಯತೆಯಲ್ಲಿ ತಾರತಮ್ಯ ಅನುಭವಿಸುವ ಜನಾಂಗಗಳ ಹಕ್ಕು ರಕ್ಷಿಸುವ ಪ್ರಮುಖ ಉದ್ದೇಶವೇ ಪ್ರಾತಿನಿಧ್ಯ. ಒಟ್ಟು ಜನಸಂಖ್ಯೆಯಲ್ಲಿ ಕಡಿಮೆ ಪ್ರಾತಿನಿಧ್ಯ ಕಂಡ ಸಮುದಾಯವನ್ನು ಸಾಮಾನ್ಯ ಸರಾಸರಿಯೊಂದಿಗೆ ಮೇಳೈಸುವುದೇ ಪ್ರಾತಿನಿಧ್ಯತೆ. ಮಹಿಳೆಯರ ಕಡಿಮೆ ಪ್ರಾತಿನಿಧ್ಯ ಬಂದರೆ, ಅವರು ಪ್ರಮುಖ ವಾಹಿನಿಯಲ್ಲಿ ದೇಶದ ಶಾಸಕಾಂಗಗಳಲ್ಲಿ ಅಗತ್ಯಕ್ಕಿಂತ ಕಡಿಮೆ ರಾಜಕೀಯ ಸ್ಥಾನವನ್ನು ಸೂಚಿಸುವುದಕ್ಕೆ ಕಡಿಮೆ ಪ್ರಾತಿನಿಧ್ಯ ಎನ್ನುವರು ಎಂಬುವ ಅನೇಕ ಸೂಚಿತ ಸಂಗತಿಗಳನ್ನ ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

**ಮುಖ್ಯಸೂಚಿಪದಗಳು:** ಸಂವಿಧಾನ, ಪ್ರಜಾಪ್ರಭುತ್ವದ ಆಶಯಗಳು, ಚುನಾವಣೆ, ಪ್ರಜಾತಂತ್ರ ರಾಜಕೀಯ ಆಡಳಿತ, ಲಿಂಗ ತಾರತಮ್ಯತೆ, ಮಹಿಳೆ ಮತ್ತು ರಾಜಕೀಯ ಪ್ರಾತಿನಿಧ್ಯತೆ

## ಪೀಠಿಕೆ

### ಪ್ರಜಾತಂತ್ರ ರಾಜಕೀಯ ಆಡಳಿತ

ಇಡೀ ವಿಶ್ವದಲ್ಲೇ ಭಾರತವು ಪ್ರಜಾಪ್ರಭುತ್ವದ ಅತ್ಯಂತ ದೊಡ್ಡ ರಾಷ್ಟ್ರ. ಇದು ನಮಗೆ ಹೆಮ್ಮೆಯ ಸಂಗತಿ. ನೂರಾರು ವರ್ಷಗಳವರೆಗೆ ನಮ್ಮ ಜನನಾಯಕರು ಸ್ವಾತಂತ್ರ್ಯ ಹೋರಾಟಗಾರರು ಕೈಗೊಂಡ ಕ್ರಾಂತಿಕಾರಕ ಚಟುವಟಿಕೆಗಳು, ಘರ್ಷಣೆಗಳು, ಯುದ್ಧಗಳು, ಉಗ್ರ ಚಳುವಳಿಗಳು, ಜನ ಮಾಡಿದ ತ್ಯಾಗ, ಬಲಿದಾನಗಳಿಂದ ಬ್ರಿಟಿಷರಿಂದ ಭಾರತ ಸ್ವಾತಂತ್ರ್ಯ ಪಡೆಯಿತು. ಅನೇಕ ಸುತ್ತಿನ ಸಭೆಗಳು, ಚರ್ಚೆಗಳು ಸಾಕಷ್ಟು ನಡೆದ ನಂತರ ನಮ್ಮ ನೇತಾರರು ಸಂಯುಕ್ತ ಸರ್ಕಾರದ ರಚನೆಗೆ ಒಲವು ತೋರಿಸಿ ಇಡೀ ದೇಶಕ್ಕೆ ಒಂದು ಕೇಂದ್ರ ಸರ್ಕಾರ ಮತ್ತು ರಾಜ್ಯಗಳಿಗೆ ರಾಜ್ಯ ಸರ್ಕಾರಗಳಿರಬೇಕೆಂದು ತೀರ್ಮಾನ ಮಾಡಿ ಸಂವಿಧಾನದ ಒಂದು ಕರಡು ಪ್ರತಿಯನ್ನು ಸಿದ್ಧಪಡಿಸಿದರು. ಅನೇಕ ಸಂಕೀರ್ಣತೆಗಳು, ವಿಭಿನ್ನತೆಗಳ ನಡುವೆ ಕೊನೆಗೆ ದಿನಾಂಕ-26 ನವೆಂಬರ್-1949 ರಲ್ಲಿ ಭಾರತವು ಒಂದು ಗಣತಂತ್ರ ಸರ್ಕಾರ ರಚನೆಯ ತೀರ್ಮಾನಗೊಂಡರು. ಆ ಸರ್ಕಾರ ಸಾರ್ವಭೌಮತ್ವ, ಸಮಾಜವಾದ, ಜಾತ್ಯಾತೀತ ಪ್ರಜಾಪ್ರಭುತ್ವ ಗಣರಾಜ್ಯದ ಪ್ರಸ್ತಾವನೆಯನ್ನು ಒಳಗೊಂಡಿರಬೇಕೆಂಬ ಅಭಿಪ್ರಾಯ ರೂಪಿಸಲಾಯಿತು. ನಮ್ಮ ಸಂವಿಧಾನವು ಸಾರ್ವಭೌಮತ್ವ, ಸಮಾಜವಾದ, ಜಾತ್ಯಾತೀತ ಪ್ರಜಾಪ್ರಭುತ್ವ ಗಣರಾಜ್ಯದ ನಿರ್ಮಾಣದ ಬಗ್ಗೆ ಹೇಳಲಾಗಿದ್ದು, ಅದು ಸ್ವಾತಂತ್ರ್ಯ ಸಮಾನತೆ, ನ್ಯಾಯ, ಮತ್ತು ಭ್ರಾತೃತ್ವದ ಆದರ್ಶಗಳನ್ನು ಹೊಂದಿರಬೇಕೆಂದು ತಿಳಿಸಲಾಗಿದೆ. ಆ ಮೂಲಕ ಕಳೆದ 75 ವರ್ಷಗಳಲ್ಲಿ ನಾವು ಯಶಸ್ವಿ ಚುನಾವಣೆಗಳನ್ನು ನಡೆಸಿದ್ದಲ್ಲದೆ, ಕೇಂದ್ರ ಮತ್ತು ರಾಜ್ಯಗಳಲ್ಲಿ ಸರ್ಕಾರಗಳ ಶಾಂತಿಯುತ ಬದಲಾವಣೆಗೆ ದೇಶದಲ್ಲಿ ಜನರ ಮುಕ್ತ ಅಭಿವ್ಯಕ್ತಿ ಸ್ವಾತಂತ್ರಕ್ಕೆ, ಮುಕ್ತ ಚಳುವಳಿಗೆ ಮತ್ತು ಮುಕ್ತ ದಾರ್ಮಿಕ ಆಚರಣೆಗಳಿಗೆ ಸಾಕ್ಷಿಯಾಗಿದ್ದೇವೆ. ನಮ್ಮ ಸಂವಿಧಾನದ ಲಿಖಿತ ಭರವಸೆಗಳ ನಡುವೆಯೂ ದುರದೃಷ್ಟವಶಾತ್ ಸಾಮಾಜಿಕ ನ್ಯಾಯದಲ್ಲಿ ಕೆಲವರ್ಗದ ಜನರು ಕೆಲವೊಮ್ಮೆ ಈಗಲೂ ಅಸಮಾನತೆಯನ್ನು ಅನುಭವಿಸುತ್ತಿದ್ದಾರೆ. ಇದರಿಂದ ಪ್ರಜಾಪ್ರಭುತ್ವ ಮೂಲ ಆಶಯ ತತ್ವ, ಗ್ರಹಿಕೆಗಳನ್ನು ವಿಚ್ಛಿದ್ರ ಶಕ್ತಿಗಳು ತಮ್ಮ ತಪ್ಪು ಅಭಿಪ್ರಾಯಗಳಿಂದ, ತಪ್ಪು ಬಳಕೆಯಿಂದ ದುರುದ್ದೇಶಗಳಿಂದ ಬಳಸಿಕೊಳ್ಳುತ್ತಾ ಬಂದಿದೆ.

ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವ ಆಡಳಿತ ಪದ್ಧತಿಯಲ್ಲಿ ವ್ಯಾಪಕ ಪ್ರಾತಿನಿಧ್ಯ ಇರಬೇಕು. ವಿಶೇಷವಾಗಿ ಮಹಿಳಾ ರಾಜಕೀಯ ಪ್ರಾತಿನಿದ್ಯ ಇರಬೇಕು. ಸಾಮಾಜಿಕ ಚಟುವಟಿಕೆಗಳನ್ನು ನಡೆಸಲು ಅಸಂಖ್ಯಾತ ಜನರ ಅಭಿಪ್ರಾಯ ಆಲಿಸಬೇಕು. ಸಮಾಜ ಮತ್ತು ವ್ಯಕ್ತಿಗೆ ಮನ್ನಣೆ ಕೊಡದಿರುವ ಪ್ರಜಾಪ್ರಭುತ್ವವು ಅಪೂರ್ಣವೆನಿಸಿಕೊಳ್ಳುತ್ತದೆ ಎಂದು ಹೇಳಬಹುದು. ಇತ್ತೀಚಿನ ವರ್ಷಗಳಲ್ಲಿ ರಾಜಕಾರಣಿಗಳು ಚುನಾಯಿತ ಪ್ರತಿನಿಧಿಗಳು, ರಾಜಕೀಯ ಪಕ್ಷಗಳ ನಡೆನುಡಿಗಳು, ವರ್ತನೆಗಳು, ಕಾರ್ಯಗಳು, ಚುನಾವಣಾ ಪ್ರಚಾರಗಳು ಇತ್ಯಾದಿಗಳೆಲ್ಲವೂ ಪ್ರಜಾಪ್ರಭುತ್ವದ ತತ್ವಗಳನ್ನು ದುರ್ಬಲಗೊಳಿಸುವ ವರ್ತನೆಗಳಾಗಿರುವುದನ್ನು ಗಮನಿಸಬಹುದು. ರಾಜಕೀಯ ನಾಯಕರ ತೋಳ್ಬಲ, ಹಣಬಲ, ಅಗ್ಗದ ಪ್ರಚಾರತಂತ್ರಗಳು ಇತ್ಯಾದಿಗಳೆ ಅವರ ಪ್ರಮುಖ ಅಸ್ತ್ರಗಳಾಗಿರುವುದನ್ನು ನಾವು ನೋಡಬಹುದಾಗಿದೆ.

**ಮಹಿಳಾ ರಾಜಕೀಯ ಪ್ರಾತಿನಿಧ್ಯತೆ**

ಇತಿಹಾಸದ ಉದ್ದಕ್ಕೂ ಮಹಿಳೆಯರು ರಾಜಕೀಯ ಅಧಿಕಾರದಿಂದ ವಂಚಿತಳಾದ ಕಾರಣದಿಂದ ಶೋಷಣೆಗೆ ಒಳಗಾದಳು. ನಂತರ ಮಾನವ ಸಮಾಜ ಆದಿಕಾಲದ ಸಮುದಾಯ ಸಮಾಜ, ಗುಲಾಮಗಿರಿ ಸಮಾಜ ಮತ್ತು ಸಾಮಂತಶಾಹಿ ಸಮಾಜಗಳಂತಹ ವಿವಿಧ ಸಾಮಾಜಿಕ ಘಟ್ಟಗಳನ್ನು ದಾಟಿ ಪ್ರಜಾಪ್ರಭುತ್ವ ಸಮಾಜದ ಘಟ್ಟಕ್ಕೆ ಬಂತು ಈ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಎರಡು ರೀತಿಯ ರಾಜಕೀಯ ಹಕ್ಕುಗಳು ದೊರೆತವು. ಒಂದು ಒಬ್ಬ ಪ್ರಜೆ ತನ್ನ ಸಮಾಜವನ್ನು ಮುನ್ನಡೆಸಲೆಂದೇ ಇರುವ ಸರ್ಕಾರದ ಕೆಲಸ ಅಂದರೆ ಕಾನೂನುಗಳನ್ನು ರಚಿಸುವುದು ಅವುಗಳನ್ನು ಅನುಷ್ಠಾನಗೊಳಿಸುವುದು ಅವುಗಳ ವ್ಯಾಖ್ಯಾನ ಮತ್ತು ಕಾನೂನುಗಳನ್ನು ಉಲ್ಲಂಘನೆ ಮಾಡಿದವರಿಗೆ ಶಿಕ್ಷೆಯನ್ನು ವಿಧಿಸುವುದು ಇಂತಹ ಕೆಲಸಗಳಲ್ಲಿ ತೊಡಗಲು ಇಚ್ಚಿಸಿದರೆ ತಾನು ಚುನಾವಣೆ ಎಂಬ ಪ್ರಕ್ರಿಯೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲುವ ಹಕ್ಕು ಇನ್ನೊಂದು ಚುನಾವಣೆಗೆ ನಿಂತ ಅಭ್ಯರ್ಥಿಗಳಲ್ಲಿ ತನಗೆ ಉಚಿತವೆಂದು ಅನ್ನಿಸಿದ ಅಭ್ಯರ್ಥಿಗೆ ಮತವನ್ನು ಕೊಡುವ ಹಕ್ಕು ಎಂದು ಹೇಳಬಹುದು. ಪ್ರಪಂಚದ ಕೆಲವು ದೇಶಗಳಲ್ಲಿ ಕೆಲವು ಕಾಲಘಟ್ಟದಲ್ಲಿ ಈ ಪ್ರಜಾಪ್ರಭುತ್ವ ಸಮಾಜವವು ರಚನೆಯಾಯಿತು ಮತ್ತು ಕೆಲವು ದೇಶಗಳಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಯು ಮಹಿಳೆಯರಿಗೆ ಪ್ರಾರಂಭದಿಂದಲೇ ಪುರುಷರಿಗೆ ಸಮಾನವಾಗಿ ಚುನಾವಣೆಗೆ ಅಭ್ಯರ್ಥಿಯಾಗುವ ಹಾಗೂ ಚುನಾಯಿಸುವ ಹಕ್ಕನ್ನು ಸ್ವೀಕರಿಸಿತ್ತು ಆದರೆ ಈ ಎರಡು ಹಕ್ಕುಗಳನ್ನು ಕೆಲವು ದೇಶಗಳು ಕೇವಲ ಪುರುಷರಿಗೆ ಮಾತ್ರವೇ ಕೊಟ್ಟು ರಾಜಕೀಯ ಆಗುಹೋಗುಗಳಲ್ಲಿ ಮಹಿಳೆಯ ಭಾಗವಹಿಸುವಿಕೆಯನ್ನು ನಿರಾಕರಿಸಿದವು. ಇಂತಹ ದೇಶಗಳಲ್ಲಿ 20ನೇ ಶತಮಾನದ ಆರಂಭದಲ್ಲಿ ಪುರುಷರ ದಬ್ಬಾಳಿಕೆಯನ್ನು ವಿರೋಧಿಸಿ ಸಮಾನ ಅವಕಾಶ ಮತ್ತು ಮತದಾನದ ಹಕ್ಕಿಗಾಗಿ ಇಂಗ್ಲೆಂಡಿನ ಮಹಿಳೆಯರು ಹೋರಾಟ ನಡೆಸಿದರು. ಅದು "ಸ್ತ್ರೀ ಜನ ಅಭಿಮತಾಧಿಕಾರ ಹೋರಾಟ ಎಂದೇ ಈ ಚಳುವಳಿ ಪ್ರಸಿದ್ಧವಾಯಿತು" 1903ರಲ್ಲಿ ಮಿಲಿನಿ ಫ್ಯಾಂಕ್ ರಸ್ಸ ಎನ್ನುವಾಕೆಯ ನಾಯಕತ್ವದ ನೇತೃತ್ವದಲ್ಲಿ 'ವುಮೆನ್ಸ್ ಸೋಶಿಯಲ್ ಅಂಡ್ ಪೊಲಿಟಿಕಲ್ ಯೂನಿಯನ್' ಸ್ಥಾಪಿಸಲ್ಪಟ್ಟು ಆ ಮೂಲಕ ಮಹಿಳೆಯರ ಹೋರಾಟವು ಮುಂದುವರಿಯಿತು. ಇದು "ಮಹಿಳೆಯರಿಗೆ ಮತ ಚಲಾಯಿಸುವ ಅಧಿಕಾರ ನೀಡುತ್ತೀರಾ? ಎನ್ನುವ ಕರಪತ್ರ ಹಿಡಿದು ಅಂದಿನ ಆಡಳಿತ ಪಕ್ಷವಾಗಿದ್ದ ಲಿಬರಲ್ ಪಕ್ಷದ" ಸಮಾವೇಶದೊಳಕ್ಕೆ ನುಗ್ಗಿ ದಾಂಧಲೆ ಎಬ್ಬಿಸಿದರು. ಈ ಚಳುವಳಿ ಹಿಂಸಾಚಾರ ರೂಪ ತಾಳಿದಾಗ 1918ರಲ್ಲಿ ಬ್ರಿಟೀಷ್ ಸರ್ಕಾರ ಮಹಿಳೆಯರ ಬೇಡಿಕೆಗೆ ತಲೆಬಾಗಿ ಮೂವತ್ತು ವರ್ಷದ ವಯಸ್ಸಿನ ಎಲ್ಲಾ ಮಹಿಳೆಯರಿಗೆ ಮತಧಾನದ ಹಕ್ಕನ್ನು ನೀಡಿತು. ಹತ್ತು ವರ್ಷಗಳ ನಂತರ 1928ರಲ್ಲಿ ಪುರುಷರಿಗೆ ಸಮನಾಗಿ ಎಲ್ಲಾ ಮಹಿಳೆಯರಿಗೆ ಮತದಾನದ ಹಕ್ಕು ನೀಡಲಾಯಿತು. (ಇದಕ್ಕೂ ಮೊದಲು 1893 ರಲ್ಲಿ ಮಹಿಳೆಯರಿಗೆ ಮತ ಚಲಾಯಿಸುವ ಹಕ್ಕನ್ನು ನ್ಯೂಜಿಲ್ಯಾಂಡ್, ನಾರ್ವೆ –1913ರಲ್ಲಿ, ಡೆನ್ಮಾರ್ಕ್ –1915ರಲ್ಲಿ, ರಷ್ಯಾ– 1917ರಲ್ಲಿ, ಆಸ್ಟ್ರಿಯ, ಜೆಕ್, ಹಂಗರಿ, ಪೋಲ್ಯಾಂಡ್‌ಗಳಲ್ಲಿ –1918ರಲ್ಲಿ ಕೊಟ್ಟಿತ್ತು). ಈ ಮದ್ಯ ರಷ್ಯಾ ದೇಶವು ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿ ಮಹಿಳೆಗೆ ಸಮಾನ ರಾಜಕೀಯ ಹಕ್ಕುಗಳು ಇಲ್ಲದ ಜಗತ್ತಿನ ಇತರೆ ದೇಶಗಳ ಮೇಲೆ ಗುರುತರವಾದ ಪರಿಣಾಮವನ್ನು ಬೀರಿತು.

ಬ್ರಿಟೀಷರು ಭಾರತದಲ್ಲಿ ಮತದಾನದ ಹಕ್ಕನ್ನು ಎಲ್ಲರಿಗೂ ನೀಡಲಿಲ್ಲ. ಬದಲಾಗಿ ಯಾರ ಹೆಸರಿನಲ್ಲಿ ಜಮೀನು ಇರುತ್ತದೋ ಮತ್ತು ಯಾರ ಹೆಸರಿನಲ್ಲಿ ಆಸ್ತಿ ಇರುತ್ತೋ ಮತ್ತು ಭೂಕಂದಾಯ ಕಟ್ಟುತ್ತಾರೋ ಅವರಿಗೆ ಮಾತ್ರ ಮತದಾನದ ಹಕ್ಕನ್ನು ನೀಡಿದರು. ಸ್ವಾತಂತ್ರ್ಯ ಬಂದ ನಂತರ 18 ವರ್ಷ ತುಂಬಿದ ಪ್ರತಿಯೊಬ್ಬ ಪ್ರಜೆಗೆ ಮತದಾನದ ಹಕ್ಕನ್ನು ನೀಡಲಾಗಿದೆ. ಭಾರತ ಸಂವಿಧಾನದಲ್ಲಿ ಕೇಂದ್ರ ಸರ್ಕಾರಕ್ಕೆ ನಿರ್ದಿಷ್ಟವಾದ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಸೂಚಿಸಲಾಗಿದೆ. ಅದರಂತೆಯೇ ಅಧಿಕಾರ ವಿಕೇಂದ್ರೀಕರಣದ ಅಂಶವನ್ನು ನಮ್ಮ ಸಂವಿಧಾನದ ಅನುಚ್ಛೇದ 40ರಲ್ಲಿ ಸೂಚಿಸಲಾಗಿದೆ. ಇದರ ಪ್ರಕಾರ ಅಂದಿನ ಮೈಸೂರು ಸರ್ಕಾರವು 'ಮೈಸೂರು ವಿಲೇಜ್ ಪಂಚಾಯತ್ಸ್ ಅಂಡ್ ಲೋಕಲ್ ಬೋರ್ಡ್ಸ್ ಆಕ್ಟ್–1959' ಎಂಬ ಕಾಯ್ದೆ ಜಾರಿಗೆ ತಂದಿತು. ಈ ಕಾಯ್ದೆಯಲ್ಲಿ ಕೇವಲ ಒಂದು ಸ್ಥಾನವನ್ನು ಗ್ರಾಮ ಪಂಚಾಯತಿಯಲ್ಲಿ ಮಹಿಳೆಯರಿಗೆ ಮೀಸಲಿಡಲಾಯಿತು. ನಂತರ 1983ರಲ್ಲಿ ಮಂಡಲ್ ಪಂಚಾಯತ್ ಕಾಯ್ದೆಯನ್ನು ಜಾರಿಗೆ ತರಲಾಯಿತು.

ನಂತರ, ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿ ಬಂದಿತು. ಈ ಸಂವಿಧಾನದ ತಿದ್ದುಪಡಿಯ ಪರಿಣಾಮವಾಗಿ ದೇಶದ ಎಲ್ಲ ರಾಜ್ಯಗಳು ಕಾಯ್ದೆಯನ್ನು ತಂದಿವೆ ಮತ್ತು ಮಹಿಳೆಯರಿಗೆ ಶೇ 1/3% ರಷ್ಟು ರಾಜಕೀಯ ಮೀಸಲಾತಿಯನ್ನು ನೀಡಿವೆ. ಅದರಂತೆ ಕರ್ನಾಟಕ ಸರ್ಕಾರವು ಕೂಡಾ 'ಕರ್ನಾಟಕ ಪಂಚಾಯತ್ ರಾಜ್ ಆಕ್ಟ್–1993' ಎಂಬ ಕಾಯ್ದೆಯನ್ನು ಜಾರಿಗೆ ತಂದು ಶೇಕಡ 50% ರಷ್ಟು ರಾಜಕೀಯ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಇದರ ಪರಿಣಾಮವಾಗಿ ಗಮನಾರ್ಹ ಸಂಖ್ಯೆಯಲ್ಲಿ ಅಂದರೆ ಸುಮಾರು 14 ಲಕ್ಷ ಮಹಿಳಾ ಸದಸ್ಯರನ್ನು ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಸಾಂಸ್ಥಿಕ ಮಟ್ಟದ ಚುನಾವಣೆಗಳಲ್ಲಿ ಮಾತ್ರ ಕಾಣಬಹುದು. ಆದರೂ 17ನೇ ಲೋಕಸಭಾ ಚುನಾವಣೆಯ ನಂತರವೂ ಮಹಿಳೆಯರಿಗೆ ಸಿಗಬೇಕಾದ ಪ್ರಾತಿನಿಧ್ಯ ಲೋಕಸಭೆಯಲ್ಲಾಗಲಿ ಅಥವಾ ವಿಧಾನಸಭೆಯಲ್ಲಾಗಲಿ ಅಷ್ಟಾಗಿ ಸಿಗಲಿಲ್ಲ ಎಂಬುದನ್ನು ಈ ಕೆಳಕಾಣಿಸಿದ ಕೇಂದ್ರ ಮತ್ತು ನಮ್ಮ ರಾಜ್ಯಗಳ ಶಾಸಕಾಂಗಳಲ್ಲಿನ ಮಹಿಳಾ ರಾಜಕೀಯ ಪ್ರಾತಿನಿಧ್ಯತೆಯ ಅಂಕಿ–ಅಂಶಗಳ ಮಾಹಿತಿಯನ್ನು ಅವಲೋಕಿಸೋಣ.

ಲೋಕಸಭೆಯಲ್ಲಿನ ಮಹಿಳಾ ರಾಜಕೀಯ ಪ್ರಾತಿನಿಧ್ಯತೆ

| ಅ. ಸಂಖ್ಯ | ಲೋಕಸಭೆ | ವರ್ಷ | ಒಟ್ಟು ಸದಸ್ಯರು | ಮಹಿಳಾ ಸದಸ್ಯರು | ಶೇಕಡವಾರು |
|---|---|---|---|---|---|
| 1 | ಒಂದನೇ | 1952 | 499 | 22 | 4.40% |
| 2 | ಎರಡನೇ | 1957 | 500 | 27 | 5.40% |
| 3 | ಮೂರನೇ | 1962 | 503 | 34 | 6.70% |
| 4 | ನಾಲ್ಕನೇ | 1967 | 523 | 31 | 5.90% |
| 5 | ಐದನೇ | 1971 | 521 | 22 | 4.20% |
| 6 | ಆರನೇ | 1977 | 544 | 19 | 3.40% |
| 7 | ಏಳನೇ | 1980 | 544 | 28 | 5.10% |
| 8 | ಎಂಟನೇ | 1984 | 544 | 44 | 8.10% |
| 9 | ಒಂಭತ್ತನೇ | 1989 | 529 | 28 | 5.29% |
| 10 | ಹತ್ತನೇ | 1991 | 514 | 39 | 7.07% |
| 11 | ಹನ್ನೊಂದನೇ | 1996 | 543 | 40 | 7.40% |
| 12 | ಹನ್ನೆರಡನೇ | 1998 | 543 | 49 | 9.20% |
| 13 | ಹದಿಮೂರನೇ | 1999 | 543 | 49 | 9.20% |
| 14 | ಹದಿನಾಲ್ಕನೇ | 2004 | 543 | 49 | 9.20% |
| 15 | ಹದಿನೈದನೇ | 2009 | 543 | 59 | 11.0% |
| 16 | ಹದಿನಾರನೇ | 2014 | 542 | 62 | 11.3% |
| 17 | ಹದಿನೇಳನೆ | 2019 | 543 | 78 | 16.00% |
| 18 | ಹದಿನೆಂಟು | 2024 | 543 | 74 | 14.00% |

17ನೇ ಲೋಕಸಭೆಯು ಅತೀ ಹೆಚ್ಚು ಮಹಿಳಾ ಸಂಸತ್ ಸಂಸದರನ್ನು ಹೊಂದಿದೆ. ಇದು ಸ್ವಾತಂತ್ರ್ಯದ ನಂತರ ಅತ್ಯಧಿಕವಾಗಿದೆ. ಚುನಾವಣೆಯಲ್ಲಿ ಸ್ಪರ್ಧಿಸಿದ್ದ 716 ಮಹಿಳಾ ಅಭ್ಯರ್ಥಿಗಳ ಪೈಕಿ ಕೇವಲ 78 ಮಂದಿ ಮಾತ್ರ ಮಹಿಳಾ ಪ್ರತಿನಿಧಿಗಳು ಆಯ್ಕೆಯಾಗಿರುವುದು.

ರಾಜ್ಯಸಭೆಯಲ್ಲಿನ ಮಹಿಳಾ ರಾಜಕೀಯ ಪ್ರಾತಿನಿಧ್ಯತೆ

| ಅ. ಸಂಖ್ಯ | ವರ್ಷ | ಒಟ್ಟು ಸದಸ್ಯರು | ಮಹಿಳಾ ಸದಸ್ಯರು | ಶೇಕಡವಾರು% |
|---|---|---|---|---|
| 1 | 1952 | 219 | 16 | 7.3% |
| 2 | 1957 | 237 | 18 | 7.6% |
| 3 | 1962 | 238 | 18 | 7.6% |
| 4 | 1967 | 240 | 20 | 8.3% |
| 5 | 1971 | 243 | 17 | 7.0% |
| 6 | 1977 | 244 | 25 | 10.2% |
| 7 | 1980 | 244 | 24 | 9.8% |
| 8 | 1985 | 244 | 28 | 11.4% |
| 9 | 1990 | 245 | 38 | 15.5% |
| 10 | 1996 | 223 | 20 | 9.0% |
| 11 | 1998 | 223 | 19 | 8.6% |
| 12 | 2004 | 245 | 27 | 11.17% |
| 13 | 2009 | 245 | 22 | 8.97% |
| 14 | 2014 | 245 | 29 | 11.83% |
| 15 | 2020 | 224 | 25 | 10.20% |
| 16 | 2023 | 231 | 24 | 9.07% |

ಪ್ರಸ್ತುತ ರಾಜ್ಯಸಭೆಯ ಒಟ್ಟು 231 ಸದಸ್ಯರಲ್ಲಿ ಒಟ್ಟು 27 ಜನ ಮಹಿಳಾ ಸದಸ್ಯರಿದ್ದಾರೆ. ಆದರೆ ಮಹಿಳಾ ಶೇಕಡಾವಾರು ಪ್ರಮಾಣ ಇನ್ನೂ ಹೆಚ್ಚಾಗಬೇಕಾಗಿದೆ ಭಾರತದ ಲೋಕಸಭೆಯಲ್ಲಾಗಲೀ ಅಥವಾ ರಾಜ್ಯಸಭೆಯಲ್ಲಾಗಲೀ ಮಹಿಳಾ ಪ್ರಾತಿನಿಧ್ಯ ಸರಿಸುಮಾರು ಶೇ.10% ರಷ್ಟರಲ್ಲಿ ಇದೆ. ಕರ್ನಾಟಕದ ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಇದಕ್ಕಿಂತ ಎನು ಭಿನ್ನವಾಗಿಲ್ಲ ಎಂದು ಹೇಳಬಹುದು.

ಕರ್ನಾಟಕ ವಿಧಾನಸಭೆಯಲ್ಲಿನ ಮಹಿಳಾ ರಾಜಕೀಯ ಪ್ರಾತಿನಿಧ್ಯತೆ

| ಅ. ಸಂಖ್ಯ | ವರ್ಷ | ಒಟ್ಟು ಶಾಸಕರು | ಮಹಿಳಾ ಶಾಸಕರು | ಶೇಕಡವಾರು |
|---|---|---|---|---|
| 1 | 1957 | 208 | 13 | 11.0% |
| 2 | 1962 | 2016 | 18 | 18.0% |
| 3 | 1967 | 216 | 5 | 6.40% |
| 4 | 1972 | 216 | 0 | 0.0% |
| 5 | 1978 | 224 | 8 | 9.0% |
| 6 | 1983 | 224 | 1 | 0.8% |
| 7 | 1985 | 224 | 8 | 9.0% |
| 8 | 1989 | 224 | 10 | 9.47% |
| 9 | 1994 | 224 | 7 | 6.87.% |
| 10 | 1999 | 224 | 6 | 6.40% |
| 11 | 2004 | 224 | 6 | 6.40% |
| 12 | 2008 | 224 | 3 | 6.87% |
| 13 | 2013 | 224 | 7 | 6.87% |
| 14 | 2018 | 224 | 10 | 9.89% |
| 15 | 2023 | 224 | 11 | 9.89% |

ನೂತನ ಕರ್ನಾಟಕ ವಿಧಾನಸಭೆಯು ಡಿಸೆಂಬರ್–19 1956 ರಂದು ಹೊಸದಾಗಿ ನಿರ್ಮಿಸಲಾದ ವಿಧಾನಸೌಧದಲ್ಲಿ ನಡೆಯಿತು. 1957 ರಲ್ಲಿ 208 ರಷ್ಟಿದ್ದ ವಿಧಾನಸಭೆಯ ಬಲವು ಪ್ರಸ್ತುತ (2024) ನಾಮನಿರ್ದೇಶಿತ ಸದಸ್ಯರ ಜೊತೆಗೆ 225 ಕ್ಕೆ ಏರಿದೆ. ಕರ್ನಾಟಕದ ವಿಧಾನಸಭೆಯ ಒಟ್ಟು ಬಲದ 4.5% ರಷ್ಟಿರುವ ಕರ್ನಾಟಕದ ಮಹಿಳಾ ಪ್ರಾತಿನಿಧ್ಯವು ದೇಶದಲ್ಲಿ ಆರನೇ ಸ್ಥಾನದಲ್ಲಿದ್ದು ಅತಿ ಕಡಿಮೆಯಾಗಿದೆ. ವಾಸ್ತವವಾಗಿ ಇದು ತಮ್ಮ ಶಾಸಕಾಂಗ ಅಸೆಂಬ್ಲಿಗಳಲ್ಲಿ ದಕ್ಷಿಣ ರಾಜ್ಯಗಳ ಮಹಿಳಾ ಶಾಸಕರ ಪಾಲು ಅತ್ಯಂತ ಕಡಿಮೆಯಾಗಿದೆ. ಆಂದ್ರಪ್ರದೇಶವು ಶೇ8% ರಷ್ಟು ಮಹಿಳಾ ಶಾಸಕರನ್ನು ಹೊಂದಿದ್ದಾರೆ. ಕೇರಳವು ಶೇ 7.9% ರೊಂದಿಗೆ ಅನುಸರಿಸುತ್ತದೆ.

ಅಂಕಿ-ಅಂಶಗಳ ಪ್ರಕಾರ ತಮಿಳನಾಡು ಮತ್ತು ತೆಲಂಗಾಣದ ಸಾಲು ಕ್ರಮವಾಗಿ ಶೇ. 5.1% ರಷ್ಟು ಮತ್ತು ಶೇ 5% ರಷ್ಟು ಬಹುತೇಕ ಒಂದೇ ಆಗಿರುತ್ತದೆ. 1957 ಮತ್ತು 1962 ರಲ್ಲಿ ನಡೆದ ಮೊದಲ ಎರಡು ಚುನವಣೆಗಳಲ್ಲಿ ಕ್ರಮವಾಗಿ 13 ಮತ್ತು 18 ಜನ ಚುನಾಯಿತರಾದ ಮಹಿಳಾ ಪ್ರಾತಿನಿಧ್ಯವು ಉತ್ತಮವಾಗಿತ್ತು. 1989, 2018 ಮತ್ತು 2023 ರಲ್ಲಿ ತಲಾ 10 ಜನ ಮಹಿಳಾ ಶಾಸಕರು ಚುನಾಯಿತರಾಗಿದ್ದನ್ನು ಹೊರತುಪಡಿಸಿ 1967 ರಿಂದ ಮಹಿಳಾ ಪ್ರಾತಿನಿಧ್ಯದ ಒಂದೇ ಅಂಕಿಯಲ್ಲೇ ಉಳಿದಿದೆ ಎಂದು ಹೇಳದಿರಬಹುದು.

ಕರ್ನಾಟಕ ವಿಧಾನ ಪರಿಷತ್ ನಲ್ಲಿ ಮಹಿಳಾ ರಾಜಕೀಯ ಪ್ರಾತಿನಿಧ್ಯ

| ಅ. ಸಂಖ್ಯೆ | ವರ್ಷ | ಒಟ್ಟು ಶಾಸಕರು | ಮಹಿಳಾ ಶಾಸಕರು | ಶೇಕಡವಾರು |
|---|---|---|---|---|
| 1 | 1952-1958 | 63 | 03 | 4.76% |
| 2 | 1959-1965 | 63 | 02 | 3.17% |
| 3 | 1966-1972 | 63 | 02 | 3.17% |
| 4 | 1973-1979 | 63 | 03 | 4.76% |
| 5 | 1980-1986 | 63 | 06 | 9.52% |
| 6 | 1987-1993 | 75 | 04 | 5.33% |
| 7 | 1994-2000 | 75 | 05 | 6.66% |
| 8 | 2001-2007 | 75 | 05 | 6.66% |
| 9 | 2008-2013 | 75 | 05 | 6.66% |
| 10 | 2014-2020 | 75 | 04 | 5.97% |
| 11 | 2020-2026 | 75 | 02 | 2.48% |

ವಿಧಾನ ಪರಿಷತ್‌ನ ಒಟ್ಟು ಸದಸ್ಯರಲ್ಲಿ ಮಹಿಳೆಯರು ಕೇವಲ ಶೇ 2.6% ರಷ್ಟಿದ್ದಾರೆ. ಮಹಿಳೆಯರ ವಿಷಯಕ್ಕೆ ಬಂದಾಗ ಹೇಗಾದರೂ ಪಕ್ಷ ನಿಷ್ಠೆಗೆ ಲೆಕ್ಕವಿಲ್ಲ. ಇದು ಅತ್ಯಂತ ದುರದೃಷ್ಟಕರ. ರಾಜಕೀಯ ಪಕ್ಷಗಳು ಮಹಿಳೆಯರನ್ನು ಸದಾ ರಾಜಕೀಯವಾಗಿ ನಿರುತ್ಸಾಹಗೊಳಿಸುತ್ತಿವೆ. ಪ್ರಸ್ತುತ ರಾಜಕೀಯ ಪಕ್ಷಗಳು ಜಾತಿ ಮತ್ತು ಧಾರ್ಮಿಕ ಮಾನದಂಡಗಳಲ್ಲಿ ತೊಡಗಿಸಿಕೊಂಡಿರುವುದು ದುರದೃಷ್ಟಕರ ಫಲಿತಾಂಶ ಎಂದು ಹೇಳಬಹುದು. ಆದರೆ ಪ್ರಜ್ಞಾಪೂರ್ವಕವಾಗಿ ಮಹಿಳೆಯರಿಗೆ ಸೀಟುಗಳ ಒಂದು ವಿಭಾಗವನ್ನು ಪಕ್ಷಕ್ಕೆ ಇಡಬೇಕು. ಸಮಾನ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ರಾಜಕೀಯ ನಾಯಕರಿಗೆ ಪ್ರತಿ ಪಕ್ಷದಲ್ಲೂ ರಾಜಕೀಯ ಇಚ್ಛಾಶಕ್ತಿ ಇಲ್ಲದಿರುವುದು ದುರದೃಷ್ಠಕರ ಎಂದು ಹೇಳಬಹುದು.

## ಉಪಸಂಹಾರ

ರಾಜಕೀಯ ಮೀಸಲಾತಿ ಮಹಿಳೆಯರ ಎಲ್ಲ ಸಮಸ್ಯೆಗಳಿಗೆ ಪರಿಹಾರವಲ್ಲ. ಆದರೆ ಪರಿಹಾರ ಹುಡುಕುವ ಒಂದು ವಿಧಾನ. ಇದರಿಂದ ನಿರೀಕ್ಷಿಸುವುದು ಸಾಮಾಜಿಕ ನ್ಯಾಯವನ್ನು. ಈ ದಿಕ್ಕಿನಲ್ಲಿ ದೇಶದ ರಾಜಕಾರಣ ಚಿಂತಿಸಬೇಕಾಗಿದೆ. ತುರ್ತಾಗಿ ಈ ಕಾಯ್ದೆಯನ್ನು ತಂದು ಮಹಿಳಾ ಮೀಸಲಾತಿಗೆ ಅನುವು ಮಾಡಿಕೊಟ್ಟು, ಮಹಿಳೆಯರ ರಾಜಕೀಯ ಪ್ರಾತಿನಿಧ್ಯತೆಯನ್ನು ದೇಶದಲ್ಲಿರುವ ಎಲ್ಲಾ ಹಂತದ ಸ್ಥಳೀಯ, ನಗರ ಮತ್ತು ಶಾಸನ ಸಭೆಗಳಲ್ಲಿ ರಾಜಕೀಯ ಭಾಗವಹಿಸುವಿಕೆಯನ್ನು ಹೆಚ್ಚಿಸಬೇಕಾಗಿದೆ ಎಂದು ಹೇಳಿದರೆ ಬಹುಶಃ ಅತೀಶಯೋಕ್ತಿಯಾಗಲಾರದು.

## ಆಧಾರ ಗ್ರಂಥಗಳು


1. ಡೇವಿಡ್ ಬೀಥಮ್ ಮತ್ತು ಈಶ್ವರಚಂದ್ರ (2015) – "ಪ್ರಜಾಪ್ರಭುತ್ವ" ನ್ಯಾಷನಲ್ ಬುಕ್ ಟ್ರಸ್ಟ ಇಂಡಿಯಾ, ನವದೆಹಲಿ–, ಪುಟ ಸಂಖ್ಯೆ–9
2. Prakash O. Challenges of women's political participation in India. National Law University, Rajasthan; 2000.
3. Lok Sabha. Members' state-wise statistical list. Available from: https://loksabhaph.nic.in/members/statewisestatisticalList.aspx
4. Lok Sabha. Available from: https://www.parliamentofloksabha.nic.in
5. Women in Indian politics. Available from: https://www.womeninindianpolitics.com
6. Jayalaxmi. Women and politics – A study in political participation. Hyderabad: Book Link Publications; 2021.
7. Singmmal MA. Women in politics. Bangalore: Kannada Sahitya Parishath; 2007.
8. Heggade DO. Women political representation in India. Mysore: Arjun Publishing House; 2007.
9. Gender-wise statistical list, Lok Sabha; 2024.
10. Election Commission of India. Report, New Delhi; 2019
11. Report on Karnataka Legislative Council & Karnataka Legislative Assembly. Government of Karnataka, Bangalore; 2023.